**ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಹೇಳಿಕೆ :-**

**ಪ್ರಶ್ನೆ:-** 2017-18ನೇ ಸಾಲಿನಲ್ಲಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಗೋಣಿತುಮಕೂರು ಗ್ರಾಮದ ಸಮುದಾಯ ಭವನಕ್ಕೆ ಸರ್ಕಾರದಿಂದ ಮಂಜೂರಾತಿ ನೀಡಿದ್ದರೂ, ಇದುವರೆಗೂ ಹಣ ಬಿಡುಗಡೆ ಮಾಡದೇ ಇರುವುದರಿಂದ ಕಾಮಗಾರಿಗಳು ಕುಂಠಿತಗೊಂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರಿಗೆ ತೊಂದರೆ ಆಗಿರುತ್ತದೆ. ಆದುದರಿಂದ ಮೇಲ್ಕಂಡ ಕಾಮಗಾರಿಗಳಿಗೆ ಕೂಡಲೇ ಹಣ ಬಿಡುಗಡೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗಲು ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

**ಉತ್ತರ:-** ಸಮಾಜ ಕಲ್ಯಾಣ ಇಲಾಖೆಯಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 327 ಪಕವಿ 2015, ದಿನಾಂಕ:16-09-2015ರಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಜನಾಂಗದವರ ಅನುಕೂಲಕ್ಕಾಗಿ ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಿರ್ಮಾಣ ಮಾಡಲಾಗುವ ಡಾ||ಬಿ.ಆರ್ ಅಂಬೇಡ್ಕರ್/ ಡಾ|| ಬಾಬು ಜಗಜೀವನರಾಂ/ ಸಮುದಾಯ ಭವನಗಳಿಗೆ ಸರ್ಕಾರದ ವತಿಯಿಂದ ನಿಗಧಿಪಡಿಸಿರುವ ಮಂಜೂರಾತಿ ಮೊತ್ತವನ್ನು ಪರಿಷ್ಕರಿಸಿ ಆದೇಶಿಸಿರುವ ಮೇರೆಗೆ ಈ ಕಛೇರಿ ಆದೇಶ ಸಂಖ್ಯೆ: ಸಕನಿ/ ಮೂ.ಸೌ-1/ ಸಿ.ಆರ್-09/2016-17, ದಿನಾಂಕ:13-02-2017ರಲ್ಲಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಗೋಣಿತುಮಕೂರು ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.12.00 ಲಕ್ಷಗಳಿಗೆ ತಾತ್ವಿಕ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 63 ಪಕವಿ 2019, ದಿನಾಂಕ:20-06-2019ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2015-16ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಸರ್ಕಾರ/ ಕೇಂದ್ರ ಕಛೇರಿಯ ವತಿಯಿಂದ ಮಂಜೂರಾತಿ ನೀಡಿರುವ ಭವನಗಳ ಪೈಕಿ ನಿವೇಶನ ರಹಿತ ಮತ್ತು ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸ್ವೀಕೃತಿಯಾಗದ 2260 ಡಾ: ಬಿ.ಆರ್ ಅಂಬೇಡ್ಕರ್/ ಡಾ: ಬಾಬು ಜಗಜೀವನರಾಂ/ ಸಮುದಾಯ ಭವನಗಳನ್ನು ರದ್ದುಪಡಿಸಿ ಆದೇಶಿಸಲಾಗಿದ್ದು, ಸದರಿ 2260 ಭವನಗಳ ಪಟ್ಟಿಯಲ್ಲಿ ಗೋಣಿತುಮಕೂರು ಗ್ರಾಮದಲ್ಲಿನ ಸಮುದಾಯ ಭವನವು ಒಳಗೊಂಡಿರುತ್ತದೆ.

ಮುಂದುವರೆದು, ಸದರಿ ಸರ್ಕಾರದ ಆದೇಶದಲ್ಲಿ ನಿವೇಶನ ಸೇರಿದಂತೆ ಇತರೆ ದಾಖಲಾತಿಗಳು, ಜಿಲ್ಲಾ ಮಟ್ಟದಿಂದ ಸ್ವೀಕೃತವಾದ ನಂತರವೇ ಭವನಗಳಿಗೆ ಮಂಜೂರಾತಿ ನೀಡಲು ಅಗತ್ಯ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ ರವರ ಪತ್ರ ಸಂಖ್ಯೆ:ಜಂ.ನಿ/ಸಕನಿ/ಸಕ5/ಸಿಆರ್-1/2018-19, ದಿನಾಂಕ:19-02-2020ರಲ್ಲಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಗೋಣಿತುಮಕೂರು ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಲಭ್ಯವಿಲ್ಲವೆಂದು ಹಾಗೂ ಮುಂದಿನ ದಿನಗಳಲ್ಲಿ ನಿವೇಶನ ಲಭ್ಯವಾದಲ್ಲಿ ನಿವೇಶನ ದಾಖಲಾತಿಗಳನ್ನು ಪಡೆದು ಕೇಂದ್ರ ಕಛೇರಿಗೆ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ.

ಅದರಂತೆ, ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಗೋಣಿತುಮಕೂರು ಗ್ರಾಮದಲ್ಲಿ ಇದುವರೆಗೂ ನಿವೇಶನ ಲಭ್ಯವಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿವೇಶನ ಲಭ್ಯವಿರುವ ಕುರಿತು ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲೆಯಿಂದ ಪ್ರಸ್ತಾವನೆ ಸ್ವೀಕೃತವಾದಲ್ಲಿ ಕೂಡಲೇ ಸಮುದಾಯ ಭವನ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡುವ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಸಕಇ 92 ಪಕವಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ
ಸಮಾಜ ಕಲ್ಯಾಣ ಸಚಿವರು.